11. ರಾಜ್ಯದ ವಿವಿಧ ಪ್ರದೇಶದಲ್ಲಿ ಗಾಳಿಯ ಗುಣಮಟ್ಟವನ್ನು ತಿಳಿಯಲು ಅಂಬಿಯೆಂಟ್ ಮಾನಿಟರಿಂಗ್ ಸ್ಟೇಷನ್ ಟ್ಔವರ್‌ಗಳನ್ನು ಸ್ಥಾಪಿಸಿ ಆ ಪ್ರದೇಶದ ಗುಣಮಟ್ಟವನ್ನು ಮಾಪನ ಮಾಡಲಾಗುತ್ತಿದೆ.

12. ವಿವಿಧ ಕಲುಷಿತಗಳನ್ನು ವಿಶ್ಲೇಷಿಸಲು ಮಾಲಿನ್ಯ ನಿಯಂತ್ರಣ ಮಂಡಳಿ ತನ್ನ ಕೇಂದ್ರ ಪ್ರಯೋಗ ಶಾಲೆ ಮತ್ತು ಇತರ 4 ಪ್ರದೇಶಗಳಲ್ಲಿ ಪ್ರಾದೇಶಿಕ ಪ್ರಯೋಗ ಶಾಲೆಗಳನ್ನು ಸ್ಥಾಪಿಸಿದೆ ಹಾಗು ಇದರ ಜೊತೆಗೆ ರಾಜ್ಯದಲ್ಲಿ ಹಲವಾರು ಪ್ರಯೋಗ ಶಾಲೆಗಳನ್ನು ನೊಂದಾಯಿಸಿದೆ.

13. ವಾಹನಗಳಿಂದ ಹೊರಸೂಸುವ ಕಲುಷಿತಗಳನ್ನು ಮಾಪನ ಮಾಡಲು ಮಂಡಳಿಯು ಉಪಕರಣಗಳನ್ನು ಖರೀದಿಸಿ ಕೆ.ಎಸ್.ಆರ್.ಟಿ.ಸಿ ಮತ್ತು ಬಿ.ಟಿ.ಎಸ್ ಸಂಸ್ಥೆಗಳಿಗೆ ನೀಡಿದೆ.

14. ವಾಹನಗಳಿಂದ ಆಗುವ ಮಾಲಿನ್ಯವನ್ನು ಮಾಪನ ಮಾಡಲು ಸಾರಿಗೆ ಇಲಾಖೆ ರಾಜ್ಯಾದ್ಯಂತ ವಿಶ್ಲೇಷಣಾ ಸಂಸ್ಥೆಗಳನ್ನು ನೊಂದಾಯಿಸಿದೆ.

15. ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಮೂಲಕ ಸರಬರಾಜು ಮಾಡಲಾಗುತ್ತಿರುವ ಇಂಧನದ ಗುಣಮಟ್ಟವನ್ನು ಕಾಲಕ್ರಮೇಣ ಪರಿಶೀಲಿಸಿ ಗುಣಮಟ್ಟವನ್ನು ಉಲ್ಲಂಘಿಸಿದ ಪೆಟ್ರೋಲ್ ಬಂಕ್‌ಗಳಿಗೆ ಕಾನೂನಿನನ್ವಯ ಕ್ರಮ ಜರುಗಿಸಲಾಗುತ್ತಿದೆ.

ವಿಷಯ: ಸರ್ಕಾರಿ ಹಾಗೂ ಖಾಸಗೀ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ.

976 (1364)

ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್): ಮಾನ್ಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಖಾಸಗಿ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆ ಎಷ್ಟು?

ಆ) ಈ ಕಾಲೇಜುಗಳ ಪೈಕಿ ಸರ್ಕಾರಿ ಕಾಲೇಜಿನಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? ಹಾಗೂ ಖಾಸಗಿ ಕಾಲೇಜಿನ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ

ಸಚಿವರು):

ಅ) ಸರ್ಕಾರಿ ಕಾಲೇಜುಗಳ ಸಂಖ್ಯೆ : 149

ಖಾಸಗಿ ಕಾಲೇಜುಗಳ ಸಂಖ್ಯೆ :

ಅನುದಾನಿತ 290

ಅನುದಾನ ರಹಿತ 338

ಆ) ಸರ್ಕಾರಿ ಕಾಲೇಜುಗಳಲ್ಲಿ - 87,756

ಖಾಸಗಿ ಕಾಲೇಜುಗಳಲ್ಲಿ - 3,73,650

ವಿಷಯ: ಬೆಂಗಳೂರಿನಲ್ಲಿ ಪರಿಸರ ಮಾಲಿನ್ಯ ತಡೆಗಟ್ಟುವುದು.

978 (1362)

ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿ ಮಿತಿ ಮೀರಿದ ಹೊಗೆಯಿಂದ ಪರಿಸರ ಮಾಲಿನ್ಯ ಉಂಟು ಮಾಡುತ್ತಿರುವ ಎಷ್ಟು ವಾಹನಗಳ ಮೇಲೆ ಸರ್ಕಾರದವರು ಮೊಕದ್ದಮೆ ಹೂಡಿದ್ದಾರೆ.

ಆ) ಇದನ್ನು ತಪ್ಪಿಸಲು ವಾಹನಗಳ ವಿರುದ್ಧ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) ದಿನಾಂಕ : 1-4-1997ರಿಂದ 28-2-1998ರವರೆಗೆ 2632 ವಾಹನಗಳ ಮಾಲೀಕರ ಮೇಲೆ ನ್ಯಾಯಾಲಯಗಳಲ್ಲಿ ಮೊಕ್ಕದ್ದಮೆ ಹೂಡಲಾಗಿದೆ.

ಆ) ಕೇಂದ್ರ ಮೋಟಾರು ವಾಹನ ನಿಯಮಾವಳಿಗಳು 1989ರ ನಿಯಮ 115(7)ರ ಪ್ರಕಾರ ವಾಹನದ ವಾಯು ಮಾಲಿನ್ಯ ಹತೋಟಿಯಲ್ಲಿದೆ ಎಂಬ ದೃಢೀಕರಣ ಪತ್ರವನ್ನು ಸದಾ ವಾಹನದ ಜೊತೆಗೆ ಕೊಂಡೊಯ್ಯುವುದು ಕಡ್ಡಾಯವಾಗಿರುತ್ತದೆ. ತಪಾಸಣಾ ಸಮಯದಲ್ಲಿ ವಾಹನದ ಮಾಲೀಕರು : ಚಾಲಕರು ಮಾನ್ಯತೆ ಇರುವ ಇಂತಹ ಪ್ರಮಾಣ ಪತ್ರವನ್ನು ತಪಾಸಣಾ ಅಧಿಕಾರಿಗಳಿಗೆ ತೋರಿಸದಿದ್ದಲ್ಲಿ ಅಂತಹ ಪ್ರಮಾಣ ಪತ್ರವನ್ನು ಏಳು ದಿನಗಳ ಒಳಗಾಗಿ ತಪಾಸಣಾ ಅಧಿಕಾರಿಗಳ ಮುಂದೆ ಹಾಜರುಪಡಿಸಬೇಕೆಂದು ತಿಳುವಳಿಕೆ ಪತ್ರ : ತನಿಖಾ ವರದಿಯನ್ನು ನೀಡಲಾಗುವುದು. ಏಳು ದಿನಗಳ ಒಳಗಾಗಿ